ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸತ್ಯಾಂಶವಿದೆ. ೪–೬ ಕುಟುಂಬಗಳು ಒಂದೇ ಮನೆಯಲ್ಲಿದ್ದಾರೆ ನಿಜ. ಅವರು ಗ್ರಾಮದ ಪಂಚಾಯಿತಿಯ ಮುಖಾಂತರ ವಾಗಿ ಸೂಚನೆಯನ್ನು ಕಳಿಸಿದರೆ ಶೀಘ್ರವಾಗಿ ಮಾಡಿಕೊಡಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಿವೇಶನಗಳನ್ನು ಪಂಚತಕ್ಕಂತಹ ವ್ಯವಸ್ಥೆಯ ಬಗ್ಗೆ ಮಾನ್ಯ ಸಚಿವರು ಹೇಳಿದರು. ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡಿದರೆ ಹತ್ತಿಪ್ಪತ್ತು ವರ್ಷವಾದರೂ ಕೊನೆಯಾಗದೆ ಹಾಗೇ ಇರತಕ್ಕಂತಹ ಉದಾಹರಣೆಗಳು ಇವೆ. ಅದು ನಿಮ್ಮ ನೋಟೀಸಿಗೂ ಬಂದಿದೆ. ಗೋಮಾಳ ಪಕ್ಕದಲ್ಲಿ ಖರಾಬ್ ಜಮೀನು ಕೆಲವು ಕಡೆಗಳಲ್ಲಿ ಇದೆ. ಅಂತಹ ಕಡೆಗಳಲ್ಲಿನ ಜನರು ನೇರವಾಗಿ ಅರ್ಜಿಯನ್ನು ಕೊಟ್ಟರೆ ನಿವೇಶನ ಹಂಚುವುದಕ್ಕೆ ತಾಪತ್ರಯ ಏನು ಇದೆ? ಖರಾಬ್ ಲ್ಯಾಂಡ್ ಅನ್ನು ಸೈಟ್‌ಗಳನ್ನಾಗಿ ಮಾಡಿ ಹಂಚುವುದಕ್ಕೆ ನಿಮ್ಮದೇನು ತಕರಾರು ಇದೆ? ಊರಿನ ಪಕ್ಕದಲ್ಲೇ ಗೋಮಾಳಗಳು ಇವೆ. ಹರಿಜನಗಿರಿಜನರು ೨೦–೨೦ ವರ್ಷಗಳಿಂದ ಕೇಳಿಕೊಂಡು ಬಂದಿದ್ದಾರೆ. ಮಂಡಲ ಪಂಚಾಯಿತಿಯವರು ಜಿಲ್ಲಾಪರಿಷತ್ತಿನವರು ಇದರ ಬಗ್ಗೆ ಆದೇಶ ಕೊಡುವುದಕ್ಕೆ ಆಗುವುದಿಲ್ಲವೇ? ಹಳ್ಳಿಗೆ ಅಟ್ಯಾಚ್ ಇರತಕ್ಕಂತಹ ಖರಾಬ್ ಲ್ಯಾಂಡ್ ಅನ್ನು ಹಂಚುವುದಕ್ಕೆ ಜಿಲ್ಲಾಪರಿಷತ್ತಿ ವರಿಗೆ, ಮಂಡಲ ಪಂಚಾಯಿತಿಯವರಿಗೆ ಸೂಕ್ತ ಆದೇಶ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಖರಾಬ್ ಜಮೀನು ಇದ್ದರೆ ಅದನ್ನು ಗ್ರಾಮಂಥಾಣಕ್ಕೆ ಸೇರಿಸುವ ಬಗ್ಗೆ ಸರಕಾರ ಪರಿಶೀಲನೆ ಮಾಡಿ ಕೊಡುತ್ತದೆ. ಅದಕ್ಕೆ ಅವರಿಂದ ಸೂಚನೆ ಬರಬೇಕು. ಅವರಿಂದ ಸೂಚನೆ ಬರದೇ ಮಾಡುವುದಕ್ಕಾಗುವುದಿಲ್ಲ. ಗ್ರಾಮಂಥಾಣ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಖರಾಬ್ ಲ್ಯಾಂಡ್ ಇದೆ, ಇದನ್ನು ಮಾಡಿಕೊಡಿ ಎಂದು ಅವರು ಹೇಳಿದರೆ ಮಾಡಿಕೊಡುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಸ್ಥಳ ಒದಗಿಸುವ ಕೆಲಸ ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ಒಂದು ವೇಳೆ ಮಂಡಲ ಪಂಚಾಯತಿಯವರು ಆ ಭೂಮಿಯನ್ನು ಅಕ್ವೈರ್ ಮಾಡಿಕೊಂಡಲ್ಲಿ ಅವರಿಗೆ ಹಣವನ್ನು ಕೊಡಬೇಕಾಗುತ್ತದೆ, ಅವರಿಗೆ ಹಣಕೊಡಲಿಕ್ಕೆ ಅವರ ಹತ್ತಿರ ಹಣ ವಿರುವುದಿಲ್ಲ. ಅಕ್ವೈರ್ ಮಾಡಿಕೊಳ್ಳಲಿಕ್ಕೆ ಬೇಕಾದಂತಹ ಹಣವನ್ನು ಸರಕಾರದವರು ಕೊಡುತ್ತಾರೆಯೇ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರಕಾರ ಕೊಡಲಿಕ್ಕೆ ಆಗುವುದಿಲ್ಲ. ಮನೆ ಯಾರಿಗೆ ಬೇಕೋ ಅವರಿಂದ ಹಣ ತೆಗೆದುಕೊಂಡು ಮಾಡಬೇಕಾಗುತ್ತದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ನಿವೇಶನದ ಅಲಾಟ್‌ಮೆಂಟ್ ಅನ್ನು ನೀಡದ ಹೊರತು ಅವರು ಹಣ ಕೊಡುವುದಿಲ್ಲ. ಲ್ಯಾಂಡ್ ಅನ್ನು ಅಕ್ವೈರ್ ಮಾಡಿಕೊಳ್ಳುವಾಗಲೇ ಹಣವನ್ನು ನಿವೇಶನ ಕೇಳಿರುವುದರಿಂದ ತೆಗೆದುಕೊಳ್ಳುತ್ತೀರಾ ಅಥವಾ ಮಂಡಲ ಪಂಚಾಯತಿಯವರೇ ಅದನ್ನು ಕೊಟ್ಟು ಇವರಿಗೆ ಅಲಾಟ್‌ಮೆಂಟ್ ನೀಡುವಾಗ ಹಣವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸೆಕ್ಷನ್–೪ ನೋಟಿಫಿಕೇಷನ್ ಆದಮೇಲೆ ಅವರು ಹಣ ತುಂಬಬೇಕು.

ಉಪಾಧ್ಯಕ್ಷರು.—ಪ್ರಶ್ನೆ ೨೫೧೧ ಶ್ರೀ ಶಿವಾನಂದ ಕೌಜಲಗಿಯವರ ಪ್ರಶ್ನೆಗೆ ಸಮಯ ಕೇಳಿದ್ದಾರೆ ಇದನ್ನು ೧೭–೬–೮೮ಕ್ಕೆ ತೆಗೆದುಕೊಳ್ಳೋಣ.

ಗುಲ್ಬರ್ಗದಲ್ಲಿರುವ ಜಿಲ್ಲಾ ಕೇಂದ್ರೀಯ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು

೧೮೪೦. **ಶ್ರೀ ಕೆ. ಹೆಚ್. ಪಾಟೀಲ್, (ಗದಗ).**—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಅಧಿಸೂಚನೆ ದಿನಾಂಕ ೨೯–೩–೮೮ರ ಮೇರೆಗೆ ಆಡಳಿತ ನಿರ್ದೇಶಕರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಗುಲ್ಬರ್ಗಾ ಇವರನ್ನು ನಾಮಕರಣ ಮಾಡಿದ್ದು ನಿಜವೇ?

ಆ) ಹಾಗಾಗಿದ್ದಲ್ಲಿ ಅಧಿಸೂಚನೆಯಲ್ಲಿ ನಾಮಕರಣ ಮಾಡಿದ ವ್ಯಕ್ತಿಯ ಹೆಸರೇನು?

ಇ) ಆಡಳಿತ ನಿರ್ದೇಶಕರನ್ನಾಗಿ ನಾಮಕರಣ ಮಾಡುವಲ್ಲಿ ಅಳವಡಿಸಿಕೊಂಡಿರುವ ನಿಯಮಾವಳಿಗಳೇನಾದರೂ ಇವೆಯೋ?

ಈ) ಆಡಳಿತ ನಿರ್ದೇಶಕರನ್ನು ಸರ್ಕಾರದಿಂದ ನಾಮಕರಣ ಮಾಡುವುದರಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಗುಲ್ಬರ್ಗಾ ಆಡಳಿತ ವ್ಯವಹಾರದಲ್ಲಿ ಕೈಹಾಕಿದಂತಾಗುವುದಿಲ್ಲವೇ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಹೌದು

ಆ) ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರ ಕಛೇರಿಯ ಪ್ರತಿನಿಧಿ. ಗುಲ್ಬರ್ಗಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಗುಲ್ಬರ್ಗಾ

ಇ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ೧೯೫೯ರ ೫೩ ಎ ಪ್ರಕಾರ ಮಾಡಿದೆ.

ಈ) ಇಲ್ಲ.

೧೦-೦೦ ಎ. ಎಂ.

ಶ್ರೀ ಕೆ.ಹೆಚ್. ಪಾಟೀಲ್.—ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ.ಅವರು ಬೇರೆ ರೀತಿಯಉತ್ತರವನ್ನು ಹೇಳಿದ್ದಾರೆ,ನನ್ನ ಮೊದಲ ಪ್ರಶ್ನೆಗೆ ಉತ್ತರವನ್ನು ಸರಿಯಾಗಿಕೊಟ್ಟಿದ್ದಾರೆ ಅದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆಗೆ ಅಧಿಸೂಚನೆಯಲ್ಲಿ ನಾಮಕರಣ ಮಾಡಿದ ವ್ಯಕ್ತಿಯ ಹೆಸರೇನು?ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಹೆಸರನ್ನು ಹೇಳಿಲ್ಲ. Is he so complicated? Or is he a controvercial man ? Is he a man who is not eligible for being nominated ಮೂರನೆಯ ಪ್ರಶ್ನೆಗೆ ಆಡಳಿತ ನಿರ್ದೇಶಕರನ್ನಾಗಿ ನಾಮಕರಣ ಮಾಡುವಲ್ಲಿ ಅಳವಡಿಸಿಕೊಂಡಿರುವ ನಿಯಮಾವಳಿಗಳೇನಾದರೂ ಇವೆಯೋ? ಎಂದು ಪ್ರಶ್ನೆ ಕೇಳಿದ್ದಕ್ಕೆ ಅದಕ್ಕೆ ಉತ್ತರವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ೧೯೫೯ರ ೫೩ ಎ ಪ್ರಕಾರ ಮಾಡಿದೆ ಎಂದು ಹೇಳಿದ್ದಾರೆ. ಈ ರೀತಿ ನಾಮಕರಣ ಮಾಡಬೇಕಾದರೆ ಯಾರನ್ನು ಮಾಡಬೇಕು ಹೇಗೆ ಮಾಡಬೇಕು ಎಂದು ನಿಮ್ಮಲ್ಲಿ ಪಾಲಿಸಿ ಏನಾದರೂ ಇದೆಯೋ ಅಥವಾ ನಿಮಗೆ ಬೇಕಾದವರನ್ನು ಮಾಡುತ್ತೀರೋನೆ?

ಶ್ರೀ ಹೆಚ್. ಏಕಾಂತಯ್ಯ.—ಹೆಸರನ್ನು ಹೇಳಲಿಲ್ಲ ಎಂದರೆ ಹೆಸರು ಇಲ್ಲ. ಆ ನೋಟೀಫಿಕೇಷನ್ ಪ್ರಕಾರ We have nominated the Managing Director or his official representative of the District Central Co-operative Bank Gulbarga. ಆದ್ದರಿಂದ ಅವರ ಹೆಸರನ್ನು ಹೇಳಿಲ್ಲ. ಅವರ ಪದನಾಮವನ್ನು ಸೂಚನೆ ಮಾಡಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವುದೇ ನಿಯಮಾವಳಿಗಳನ್ನು ಇದರಲ್ಲಿ ಮಾಡಿಕೊಂಡಿಲ್ಲ. ಸರ್ಕಾರದ ಕಾಯ್ದೆಯ ಪ್ರಕಾರ ಏನು ಅಧಿಕಾರ ಇದೆ, ಆ ಅಧಿಕಾರವನ್ನು ಚಲಾಯಿಸಿ ಅವರನ್ನು ನಾಮಕರಣ ಮಾಡಿದೆ.

ಶ್ರೀ ಕೆ. ಹೆಚ್ ಪಾಟೀಲ್.—ಅಲ್ಲಿ ನೀವು ಮ್ಯಾನೇಜಿಂಗ್ ಡೈರೆಕ್ಟರ್ ಜಾಗಕ್ಕೆ ನಾಮಕರಣ ಮಾಡಿದ್ದೀರಲ್ಲ ಅವರು ಯಾರು? ಎಂದೂ ಕೇಳಿದ್ದೇನೆ.

SRI H. EKANTHAIAH.—By designation he is nominated.

SRI H. K PATIL —What is the designation?

SRI H. EKANTHAIAH.—Manging Director has been nominated. Managing Director of the DCC Bank, Gulbarga is nominated on the Board of the Sugar Factory of Aland

ಶ್ರೀ ಕೆ. ಹೆಚ್ ಪಾಟೀಲ್ —ಇದಕ್ಕೆ ಏನಾದರೂ ನಿಯಮವೇನಾದರೂ ಇದೆಯೇ? ಅದನ್ನು ಬಿಟ್ಟು ಅವರನ್ನು ಹೇಗೆ ಮಾಡಿದ್ದೀರಿ ಎಂದು ಕೇಳುತ್ತೇ.

SRI. K. H. PATIL.--The elected body was there that elected body was to send its representative.

ಶ್ರೀ ವಿಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಆಫೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಆಡಳಿತ ಸಮಿತಿ ಈ ನಾಮಕರಣವನ್ನು ಮಾಡಿಕೊಂಡಿಲ್ಲ. Under Section 53 (A) of the Act we have nominated the Managing director of the DCC Bank, Gulbarga on the Board of Aland Sugar Factory.

ಶ್ರೀ ಕೆ. ಹೆಚ್. ಪಾಟೀಲ್.—ಸೆಕ್ಷನ್ ೫೩ನ್ನು ತಾವು ನೋಡಿ. ನೀವು ಯಾವ ಸಂಸ್ಥೆಗಳಿಂಳಗೆ ೫೧ ಪರ್‌ಸೆಂಟ್‌ಗಿಂತ ಹೆಚ್ಚು ಶೇರನ್ನು ಹಾಕಿದ್ದೀರಿ ಅಥವಾ ಐದು ಲಕ್ಷ ರೂಪಾಯಿಗೂ ಹೆಚ್ಚು ಹಣ ಹಣವನ್ನು ತೊಡಗಿಸಿದ್ದೀರಿ, ಆ ಸಂಸ್ಥೆಯ ಹಿತದೃಷ್ಟಿಯಿಂದ ಅಲ್ಲಿ ಆ ಸಂಸ್ಥೆಗೆ ನಾಮಿನೇಟ್ ಮಾಡ ಬೇಕು. ಅದಕ್ಕೆ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬ ಅಧಿಕಾರಿಯನ್ನು ಷುಗರ್ ಫ್ಯಾಕ್ಟರಿಗೆ ಮಾಡುವುದರಲ್ಲಿ ಏನು ಅರ್ಥ ಇದೆ? What was the intention ? ಇದರ ಬಗ್ಗೆ ನನಗೆ ಬರೆದಿದ್ದಾರೆ,ನಾನು ಅದನ್ನು ಕೇಳುತ್ತಿಲ್ಲ ಅಲ್ಲಿ ತಕರಾರು ಇದೆ,ಷುಗರ್ ಫ್ಯಾಕ್ಟರಿಯಲ್ಲಿ ಮೆಷಿನರಿಗಳನ್ನು ಎಲ್ಲಾ ಹೊಲಸುಮಾಡಿದ್ದಾರೆ ಎಲ್ಲಾ ಆ ಹೊಲಸನ್ನು ಮುಚ್ಚಿಕೊಳ್ಳುವುದಕೋಸ್ಕರ ಅವರನ್ನು ನಾಮಿನೇಟ್ ಮಾಡಿದ್ದೀರಿ. ಆ ದೃಷ್ಟಿಯಿಂದ ಇವತ್ತಿಗೂ ಸಹಾ ಇನ್ನೊಮ್ಮೆ ಅವಕಾಶವನ್ನು ಕೊಡುತ್ತೇನೆ, ದಯವಿಟ್ಟು ಎನ್‌ಕ್ವೈರಿ ಮಾಡಿಸಿ ಅದನ್ನು ಬದಲಾವಣೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಕಾಂತಯ್ಯ.—ಸನ್ಮಾನ್ಯ ಸದಸ್ಯರು ಹೇಳಿದ್ದಾರೆ, ಅಂಥ ಯಾವುದೇ ತಪ್ಪು ಮಾಡಿದ್ದರೆ ಅದನ್ನು ಮುಚ್ಚಿಕೊಳ್ಳುವುದಕ್ಕಾಗಿ ಇಲ್ಲಿ ನಾಮಿನೇಟ್ ಮಾಡಿಲ್ಲ. ಆ ತಪ್ಪನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿ ಅದರ ಬಗ್ಗೆ . . .

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ಗಮನಕ್ಕೂ ಬಂದಿದೆ, ಸರ್ಕಾರದ ಗಮನಕ್ಕೂ ಬಂದಿದೆ, ಮಿನಿಸ್ಟರ್ ಸಹಾ ಹೋಗಿ ಬಂದಿದ್ದಾರೆ, ಅಲ್ಲಿ ಇನ್ನೇನೂ ಆಗಿದೆಯೋ ಗೊತ್ತಿಲ್ಲ, ಹೋದಸಾರಿ ಜಾಲಪ್ಪನವರು ಇದ್ದಾಗ ಈ ವಿಷಯ ಹೌಸ್‌ನಲ್ಲಿ ಬಂದಿತ್ತು. ಇನ್ನಾದರೂ ದಯವಿಟ್ಟು ಅದನ್ನು ತೆಗೆಸಿ ನೋಡಿ.

ಶ್ರೀ ಹೆಚ್. ವಿಕಾಂತಯ್ಯ.—ಆಗಬಹುದು.

ಶ್ರೀ ಕೆ. ಹೆಚ್. ಪಾಟೀಲ್.—ಅದನ್ನು ಬದಲಾವಣೆ ಮಾಡುವ ಹಾಗಿದ್ದರೆ ಅದನ್ನು ಮಾಡ ಬೇಕಾಗುತ್ತದೆ. ಅವರನ್ನು ಡಿಫೌಡ್ ಮಾಡಿಕೊಂಡರೆ ಅಧಿಕಾರಿಗಳನ್ನು ಡಿಫೌಡ್ ಮಾಡಿದ ಹಾಗೆ ಆಗುತ್ತದೆ.

ಶ್ರೀ ಹೆಚ್. ವಿಕಾಂತಯ್ಯ.—ಯಾರನ್ನು ಸಂರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ.ಖಂಡಿತವಾಗಲೂ ಯಾರಾದರೂ ತಪ್ಪು ಮಾಡಿದ್ದರೆ ವಿಚಾರಣೆ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ : ೮೦೩ (ತಿಗಳಿ)

ಉಪಾಧ್ಯಕ್ಷರು.—ಈ ಪ ಶ್ನೆಯನ್ನು ತಡೆಹಿಡಿದು ಸ್ವಲ್ಪ ಮುಂದಕ್ಕೆ ಹಾಕಲಾಗಿದೆ. ಏಕೆಂದರೆ ಈ ಪ್ರಶ್ನೆಯನ್ನು ಅವರನಾಥಶೆಟ್ಟಿಯವರಿಗೆ ಕಳುಹಿಸಿಕೊಡಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ.—ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ಆನ್ಸರ್ ಬಂದಿದೆ. ನಾನು ಜಿಲ್ಲೆಯಲ್ಲೇ ಕೇಳಿದ್ದೇನೆ.

ಉಪಾಧ್ಯಕ್ಷರು.—ಉತ್ತರ ಬರುತ್ತದೆ, ಮುಂತುಹೋಗಿ. ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಶ್ರೀ ಗೋಪಾಲ ಮುಂಕುಂದ ಕಾನಡೆ —ಆಪರೂಪಕ್ಕೆ ಬಂದಿದೆ. ಯಾವಾಗ ಅವರಿಗೆ ಉತ್ತರವನ್ನು ಕೊಡುತ್ತಾರೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಎಸ್.ಆರ್ ಬೊಮ್ಮಾಯಿ.—ಮುಂದಿನ ವಾರ ಕೊಡುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.--ಖಂಡಿತವಾಗಿ ಕೊಡುತ್ತೀರಾ ?